# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

**ಕನ್ನಡ ಅಧ್ಯಯನ ವಿಭಾಗ**
**ಜಿಕೆವಿಕೆ, ಬೆಂಗಳೂರು–65.**
**ದೂರವಾಣಿ: 080–23330239**


---

ಸಂ.ಕಅವಿ/ಕ.ಕೃ.ಪು.ಸ್ಪರ್ಧೆ/153/2022–23 ದಿನಾಂಕ: 13–6–2022

## ಸುತ್ತೋಲೆ

ವಿಷಯ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ **ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ–2021**.

---

ಕನ್ನಡದಲ್ಲಿ ಪ್ರಕಟವಾಗಿರುವ ಕೃಷಿ ಸಂಬಂಧಿತ ಕನ್ನಡ ಪುಸ್ತಕಗಳಿಗೆ **'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ–2021'** ನೀಡುವ ಸಲುವಾಗಿ ಲೇಖಕರಿಂದ ಪುಸ್ತಕಗಳನ್ನು ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿಯು ರೂ. 10,000/– ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. 2021ರ ಜನವರಿಯಿಂದ ಡಿಸೆಂಬರ್ 2021ರ ಒಳಗೆ ಪ್ರಕಟವಾಗಿರುವ ಪುಸ್ತಕಗಳ ತಲಾ ಮೂರು ಪ್ರತಿಗಳನ್ನು ಲೇಖಕರು ಈ ಮುಂದಿನ ನಿಯಮ ಮತ್ತು ನಿಬಂಧನೆಗಳಿಗೊಳಪಟ್ಟು **ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು–560065** ಇವರಿಗೆ ತಲುಪುವಂತೆ **2022ರ ಜುಲೈ, 30ರೊಳಗೆ** ಕಳುಹಿಸಬೇಕು. ಈ ಸುತ್ತೋಲೆ ಮತ್ತು ಅರ್ಜಿ ನಮೂನೆಯನ್ನು http://uasbangalore.edu.in ವೆಬ್‌ತಾಣದಿಂದಲೂ ಪಡೆಯಬಹುದು. ಹೆಚ್ಚಿನ ವಿವರಗಳಿಗೆ kannada.uas@gmail.com ಇ–ಮೇಲ್ ವಿಳಾಸ ಸಂಪರ್ಕಿಸುವುದು.

**ನಿಯಮ ಮತ್ತು ನಿಬಂಧನೆಗಳು**

1. ಪುಸ್ತಕವು ಕನ್ನಡದಲ್ಲಿ ರಚಿತವಾಗಿರಬೇಕು, ಕೃಷಿ ಸಂಬಂಧಿತ ವಿಷಯಗಳಿಗೆ ಸಂಬಂಧಿಸಿರಬೇಕು ಹಾಗೂ ವಿಷಯವು ಸಮಗ್ರವಾಗಿರಬೇಕು.
2. ಪುಸ್ತಕವು ಸ್ವಂತ ರಚನೆಯಾಗಿರಬೇಕು.
3. ಪುಸ್ತಕ ಅನುವಾದಿತ ಕೃತಿಯಾಗಿರಬಾರದು ಹಾಗೂ ಇತರ ಲೇಖಕರ ಬರಹಗಳ ಸಂಪಾದಿತ ಕೃತಿಯಾಗಿರಬಾರದು.
4. ಪುಸ್ತಕವು ಮೊದಲ ಪ್ರಕಟಣೆ/ಆವೃತ್ತಿಯಾಗಿರಬೇಕು ಹಾಗೂ ಮರುಮುದ್ರಿತ/ಪರಿಷ್ಕರಿಸಿ ಮರುಮುದ್ರಿಸಿದ ಕೃತಿಯಾಗಿರಬಾರದು.
5. ಪುಸ್ತಕವು ಯಾವುದೇ ಕೃಷಿ ಸಂಬಂಧಿತ ಕೈಪಿಡಿಯಾಗಿರಬಾರದು.
6. ಪುಸ್ತಕವು ಕನಿಷ್ಠ 1/8 ಕ್ರೌನ್ ಅಳತೆಯ ಮತ್ತು ತಾಂತ್ರಿಕ ಪುಟಗಳನ್ನು ಹೊರತುಪಡಿಸಿ ಕನಿಷ್ಠ 50 ಪುಟಗಳಷ್ಟಾದರೂ ಇರಬೇಕು.
7. ಪುಸ್ತಕವು ನಿರ್ದಿಷ್ಟಪಡಿಸಿದ ವರ್ಷದಲ್ಲೇ ಪ್ರಕಟವಾಗಿರಬೇಕು (ಆಯಾ ವರ್ಷದ ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಕಟವಾಗಿರಬೇಕು).
8. ಈ ಪ್ರಶಸ್ತಿ ಲೇಖಕರಿಗೆ ಮಾತ್ರ ನೀಡುವುದು. ಪ್ರಕಾಶಕರಿಗೆ/ಮುದ್ರಕರಿಗೆ ನೀಡಲಾಗುವುದಿಲ್ಲ.
9. ಲೇಖಕರು ಮೃತರಾಗಿದ್ದಲ್ಲಿ ಅವರ ಕಾನೂನಿನನ್ವಯ ವಾರಸುದಾರರು ಪುಸ್ತಕವನ್ನು ಪ್ರಶಸ್ತಿಗೆ ಸಲ್ಲಿಸಬಹುದು ಹಾಗೂ ಅದರೊಂದಿಗೆ ಮೃತರ ಮರಣ ಪ್ರಮಾಣ ಪತ್ರವನ್ನು ಲಗತ್ತಿಸಿರಬೇಕು. ಆ ಪುಸ್ತಕ ಪ್ರಶಸ್ತಿ ಪಡೆದಲ್ಲಿ ಪ್ರಶಸ್ತಿ ಫಲಕವನ್ನು ಲೇಖಕರ ಹೆಸರಿಗೆ ನೀಡಲಾಗುವುದು ಮತ್ತು ಪ್ರಶಸ್ತಿ ಹಣದ ಚೆಕ್ ಅನ್ನು ವಾರಸುದಾರರಿಗೆ ನೀಡಲಾಗುವುದು.
10. ಒಬ್ಬರಿಗಿಂತ ಹೆಚ್ಚು ಲೇಖಕರಿದ್ದಲ್ಲಿ ಪ್ರಶಸ್ತಿ ಮೊತ್ತವನ್ನು ಸಮಾನವಾಗಿ ಹಂಚಲಾಗುವುದು ಹಾಗೂ ಮೊದಲ ಲೇಖಕರನ್ನು ಮಾತ್ರ ಪ್ರಶಸ್ತಿ ಸ್ವೀಕರಿಸಲು ಆಹ್ವಾನಿಸಲಾಗುವುದು.
11. ಆ ವರ್ಷದಲ್ಲಿ ಒಬ್ಬ ಲೇಖಕರ ಒಂದಕ್ಕಿಂತ ಹೆಚ್ಚು ಪುಸ್ತಕಗಳು ಪ್ರಕಟವಾಗಿದ್ದಲ್ಲಿ ಅಂತಹ ಲೇಖಕರು ಗರಿಷ್ಠ ಮೂರು ವಿವಿಧ ಪುಸ್ತಕಗಳನ್ನು ಪ್ರಶಸ್ತಿಗೆ ಸಲ್ಲಿಸಬಹುದು.
12. ಲೇಖಕರು ಸಲ್ಲಿಸುವ ಪುಸ್ತಕಕ್ಕೆ ಯಾವುದಾದರೂ ಪ್ರಶಸ್ತಿ/ಬಹುಮಾನಗಳು ಸಂದಿದ್ದಲ್ಲಿ ಅಂತಹ ಪುಸ್ತಕಗಳನ್ನು ಸಲ್ಲಿಸಬಾರದು.
13. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 'ಕೃಷಿ ಪುಸ್ತಕ ಪ್ರಶಸ್ತಿ' ಪಡೆದ ಲೇಖಕರು ಬಹುಮಾನದ ವರ್ಷವನ್ನೊಳಗೊಂಡಂತೆ 5 ವರ್ಷಗಳವರೆಗೆ ಪ್ರಶಸ್ತಿಗೆ ತಮ್ಮ ಪುಸ್ತಕಗಳನ್ನು ಸಲ್ಲಿಸುವಂತಿಲ್ಲ.
14. ಸ್ಪರ್ಧೆಗೆ ಸಲ್ಲಿಸುವ ಲೇಖಕರು 3 ಪ್ರತಿಗಳನ್ನು ತಮ್ಮದೇ ವೆಚ್ಚದಲ್ಲಿ ಅಂಚೆ/ಕೊರಿಯರ್ ಮೂಲಕ ಅಥವಾ ಖುದ್ದಾಗಿ ಸಲ್ಲಿಸಬೇಕು.

15. ಪ್ರಶಸ್ತಿ ವಿಜೇತರಿಗೆ ಮಾತ್ರ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಲು 2ನೇ ದರ್ಜೆ ರೈಲು ಅಥವಾ ಬಸ್ಸು ಪ್ರಯಾಣದ ವೆಚ್ಚವನ್ನು ಹಾಗೂ ಸ್ಥಳೀಯ ಪ್ರಯಾಣ ವೆಚ್ಚವನ್ನು ಭರಿಸಲಾಗುವುದು.
16. ಪ್ರಶಸ್ತಿಯ ತೀರ್ಮಾನ ಕುರಿತಂತೆ ಯಾವುದೇ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾದುದು.

(ಡಾ. ಜೆ. ಬಾಲಕೃಷ್ಣ)
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

**<u>ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ–2021'ರ ಅರ್ಜಿ ನಮೂನೆ</u>**

1. ಲೇಖಕರ ಹೆಸರು: ______________________________

2. ವಿಳಾಸ: ______________________________

______________________________

______________________________ ಪಿನ್ ಕೋಡ್: __________

3. ದೂರವಾಣಿ ಸಂಖ್ಯೆ: __________ ಇ–ಮೇಲ್__________

4. ಪುಸ್ತಕದ ಶೀರ್ಷಿಕೆ: ______________________________
______________________________

5. ಪ್ರಕಟವಾದ ವರ್ಷ: ______________________________

6. ಪ್ರಕಾಶಕರು ಮತ್ತು ಅವರ ವಿಳಾಸ: ______________________________
______________________________

7. ಪುಟಗಳ ಸಂಖ್ಯೆ: __________

ಲೇಖಕರ ಸಹಿ

**ಘೋಷಣೆ**

ಶೀರ್ಷಿಕೆಯ ಈ ಪುಸ್ತಕವು ನನ್ನ ಸ್ವಂತ ರಚನೆಯಾಗಿದ್ದು, ಇದಕ್ಕೆ ಯಾವುದೇ ಪ್ರಶಸ್ತಿ/ಬಹುಮಾನ ಸಂದಿರುವುದಿಲ್ಲ. ಈ ಮೇಲೆ ನೀಡಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾದವುಗಳೆಂದು ಪ್ರಮಾಣೀಕರಿಸುತ್ತೇನೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ' ನಿಯಮ, ನಿಬಂಧನೆಗಳಿಗೆ ಬದ್ಧನಾಗಿರುತ್ತೇನೆ.

ಸ್ಥಳ:
ದಿನಾಂಕ: ಲೇಖಕರ ಸಹಿ